20

# ಜಾಗತಿಕ ನಿಯೋಗಗಳ ಆಹ್ವಾನವನ್ನು ಎದುರಿಸುವುದು

ಸಭೆಯ ಕಾರ್ಯದ ಅಂತರಂಗದಲ್ಲಿ ಮಿಶನ್ ಸೇವೆಯ ಆಹ್ವಾನವಿರುತ್ತದೆ. ಯಾರೋ ಒಬ್ಬರು ಹೇಳಿದಂತೆ, "ದೇವರಿಗೆ ಒಬ್ಬನೇ ಮಗನಿದ್ದಾನೆ, ಮತ್ತು ಆತನು ಒಬ್ಬ ಮಿಶನರಿಯಾಗಿದ್ದಾನೆ." ಯೇಸುವು ಪರಲೋಕವನ್ನು ಬಿಟ್ಟು "ತಪ್ಪಿಹೋಗಿರುವವರನ್ನು ಹುಡುಕಿ ರಕ್ಷಿಸುವದಕ್ಕಾಗಿ" ಭೂಲೋಕಕ್ಕೆ ಬಂದನು (ಲೂಕ 19:10). ಸಭೆಯು ಇಂದು ಕ್ರಿಸ್ತನ ದೇಹವಾಗಿದೆ; ಅದರ ಪ್ರಾಧಾನ್ಯತೆಗಳು ಅದರ ಒಡೆಯನಿಂದ ನಿರ್ಧರಿಸಲ್ಪಡುತ್ತವೆ. "ತಪ್ಪಿ ಹೋದದ್ದನ್ನು ಹುಡುಕಿ ರಕ್ಷಿಸುವುದು" ಆತನ ಸೇವಾ ಕಾರ್ಯವಾಗಿದ್ದರೆ, ಇಂದು ಅದನ್ನೆ ಮಾಡುವುದು ಆತನ ಜನರ ಸೇವೆಯಾಗಿರುತ್ತದೆ. ತಮ್ಮ ಕರ್ತನಿಗೆ ಮತ್ತು ಸಭೆಯ ಸೇವೆಗೆ ನಂಬಿಗಸ್ತರಾಗಿರುವ ಸಭೆಯ ನಾಯಕರು ಜಾಗತಿಕ ಮಿಶನ್ನುಗಳಿಗೆ ಆಹ್ವಾನಕ್ಕೆ ಗಮನ ಕೊಡತಕ್ಕದ್ದು.

ಮಿಶನ್ನುಗಳನ್ನು ಕುರಿತು ಉದ್ಭವವಾಗುವ ಎರಡು ಸಮಸ್ಯೆಗಳು ಸ್ಥಳಿಯ ಸಭೆಯ ನಾಯಕತ್ವದ ಮೇಲೆ ಪರಿಣಾಮ ಮಾಡುತ್ತವೆ: (1) ಅದನ್ನು ಮಾಡುವುದು ಮತ್ತು (2) ಅದನ್ನು ಸರಿಯಾಗಿ ಮಾಡುವುದು!

## ಮಿಶನ್ನುಗಳಲ್ಲಿ ಸಭೆಯನ್ನು ತೊಡಗಿಸುವುದು

ಸಭೆಯ ನಾಯಕರು ಮಿಶನ್ ಕೆಲಸದ ಮೇಲೆ ಮಹತ್ವವನ್ನು ಒತ್ತಿ ಹೇಳ ತಕ್ಕದ್ದು.[1] ಸಭೆಯು ಪ್ರತಿಯೊಂದು ದೇಶದ ಜನರನ್ನು ಶಿಷ್ಯರನ್ನಾಗಿ ಮಾಡುವುದಾಗಿದೆ (ಮತ್ತಾಯ 28:18-20). ಈ ವಿಷಯದಲ್ಲಿ ಸಭಾ ಹಿರಿಯರು ಎದುರಿಸುವ ಸಮಸ್ಯೆಯು, ನಿಯಮದಂತೆ, ಒಪ್ಪಂದವಿರದಂಥ ಹೋರಾಟವಾಗಿರುವದಿಲ್ಲ, ಆದರೆ ಮೈಮರೆಯುವಿಕೆಯಿಂದಾದದ್ದಾಗಿದೆ. ಪ್ರಶ್ನೆಯು ಇದಾಗಿದೆ: "ಸಭೆಯ ನಾಯಕರು ಸದಸ್ಯತ್ವವು ಸುವಾರ್ತೆಯನ್ನು ಇಡೀ ಜಗತ್ತಿಗೆ ತೆಗೆದು ಕೊಂಡು ಹೋಗುವದರಲ್ಲಿ ಹೆಚ್ಚು ಚಟುವಟಿಕೆಯುಳ್ಳದ್ದಾಗಲು ಚಲಿಸುವಂತೆ ಹೇಗೆ ಮಾಡುತ್ತಾರೆ?" ನಾವು ಐದು ಸೂಚನೆಗಳನ್ನು ಅಧ್ಯಯನ ಮಾಡುತ್ತೇವೆ.

### ಮಿಶನ್ ಪ್ರವೃತ್ತಿಯುಳ್ಳ ನಾಯಕತ್ವವನ್ನು ಒದಗಿಸುವದು

ಒಂದು ಸಭೆಯು ಹೆಚ್ಚು ಮಿಶನ್ ಕೆಲಸಕ್ಕೆ ಪ್ರತಿಷ್ಟಿಸಿಕೊಳ್ಳುವದಾದರೆ, ಅದಕ್ಕೆ ಮೊದಲು ಮಿಶನ್ ಪ್ರವೃತ್ತಿಯುಳ್ಳ ಜನರ ಅಗತ್ಯತೆಯಿದೆ. ನಾಯಕರು ತಾವು ಜಾಗತಿಕ ಸುವಾರ್ತಾ ಸೇವೆಯ ಬಗ್ಗೆ ಆಸಕ್ತಿಯುಳ್ಳವರಾಗಿದಿದ್ದರೆ ಇತರ ಕ್ರೈಸ್ತರನ್ನು ಅದರಲ್ಲಿ ಆಸಕ್ತಿಯುಳ್ಳವರನ್ನಾಗಿ ಮಾಡಲಾರರು. "ನೀನು ತಿರುಗಿ ಕೊಂಡ ಮೇಲೆ ನಿನ್ನ ಸಹೋದರರನ್ನು ದೃಢಪಡಿಸು" (ಲೂಕ 22:32) ಎಂದು ಯೇಸುವು ಪ್ರೇತ್ರನಿಗೆ ಹೇಳಿದನು. ನಾಯಕರು ಇತರರನ್ನು ಮಿಶನ್ನುಗಳಿಗೆ ಪ್ರತಿಷ್ಟಿಸಿಕೊಂಡವರನ್ನಾಗಿ ಮಾಡುವ ಮೊದಲು ಬಹುಶಃ ಅವರು ಮಾರ್ಪಡಿಸುವ ಅಗತ್ಯತೆ ಇರುತ್ತದೆ.

ಸಭೆಯ ಎಲ್ಲಾ ನಾಯಕರು ಮಿಶನ್ ಮೈಂಡೆಂಡ್ ಆಗಿರುವದಿಲ್ಲವೋ? ಹಾಗಿರ ಬೇಕಾದ

ಅಗತ್ಯತೆಯಿಲ್ಲ. ಕೆಲವು ಪ್ರಸಂಗಿಗಳು "ತಮ್ಮ" ಸಭೆಯನ್ನು ಕಟ್ಟುವದರಲ್ಲಿ ಮಾತ್ರ ಆಸಕ್ತ ರಾಗಿದ್ದಾರೆ, ಮತ್ತು ಮಿಶನರಿಗಳನ್ನು ಸಂಶಯದಿಂದ ನೋಡುತ್ತಾರೆ. ಕೆಲವು ಹಿರಿಯರೂ, ಸಹ ಮಿಶನ್ ಸೇವೆಯಲ್ಲಿ ಆಸಕ್ತಿ ಹೊಂದಿರುವದಿಲ್ಲ. ಅದರ ಬಗ್ಗೆ ನೀವು ಸಂಶಯಪಟ್ಟರೆ, ಸಭೆಗಳಿಂದ ಸಹಾಯ ಹುಡುಕಿದ ಆಗಬೇಕೆಂದಿರುವ ಯಾವುದೇ ಮಿಶನರಿಯನ್ನು ಕೇಳಿರಿ!

**ಸಭೆಯ ಉದ್ದೇಶದ ಬೈಬಲಿನ ದೃಷ್ಟಿಕೋನವನ್ನು ಕೊಡುವುದು**

ಎರಡನೆಯದು, ಒಂದು ಸಭೆಗೆ ಸಭೆಯ ಉದ್ದೇಶದ ಬೈಬಲಿನ ದೃಷ್ಟಿಕೋನದ ಅಗತ್ಯತೆಯಿದೆ. ಸಭೆಯು ಯಾವುದರ ಬಗೆಗೆ ಇರುತ್ತದೆ?

*ಸಭೆಯ ಉದ್ದೇಶವು ಅದರ ಸದಸ್ಯರುಗಳಿಗಾಗಿ ಸ್ವಯಂ ನೆರವೇರುವಿಕೆಯನ್ನು ಒದಗಿಸುವುದು ಪ್ರಾಥಮಿಕವಾದದ್ದಾಗಿರುವದಿಲ್ಲ.* ನಮ್ಮ ಯುಗದ ಪ್ರಸ್ತಾಪವು ಆಗಿದೆ. ಇತರರಿಗಾಗಿ ಯಾವ ಚಿಂತನೆಯೂ ತೋರಿಸಲ್ಪಡುವುದಿಲ್ಲ; "ನನಗಾಗಿ" ಒಂದು ದೊಡ್ಡ ವಿಷಯವಾಗಿದೆ. ಜಗತ್ತು ಸ್ವಯಂ ಪೂರೈಸುವಿಕೆಯಲ್ಲಿ ಅತಿಶಯವಾದ ಆಸಕ್ತಿಯನ್ನು, ಪ್ರತಿಯೊಂದು ಅಪೇಕ್ಷೆಯ ತೃಪ್ತಿಗಾಗಿ ಕೂಗುತ್ತಿರುವ ಪ್ರಾಪಂಚಿಕತೆಯನ್ನು ಪ್ರದರ್ಶಿಸುತ್ತಲಿದೆ. ಮತ್ತು ತಕ್ಷಣದ ಸಂತೃಪ್ತಿಗಾಗಿ ಒತ್ತಿ ಹೇಳುತ್ತಲಿದೆ.

ಈ ಸ್ವಯಂ ಕೇಂದ್ರವಾದ ಯುಗಕ್ಕೆ ಹೇಳಲು ಸಭೆಗೆ ಏನು ಇರುತ್ತದೆ? ಸ್ವಾರ್ಥತೆಯ ದುಷ್ಟತನಕ್ಕೆ ವಿರುದ್ಧವಾಗಿ ಎಚ್ಚರಿಕೆಯ ಮತ್ತು ಸ್ವಯಂ ಅಲ್ಲಗಳೆಯುವಿಕೆಯ ಸದ್ಗುಣವನ್ನು ಹೊಗಳುವ ಬೈಬಲಿನ ಸಂದೇಶವು ಸಭೆಗೆ ಇದೆಯೋ? ಬೋಧಿಸುವದರ ಅನಿಸುವಿಕೆಯ ಅಗತ್ಯತೆಗಳಿಗೆ ಸುವಾರ್ತೆಗೆ ವಿಧೇಯರಾಗುವವರಿಗೆ ಸಂಬಂಧಿಸಿ ನೀತಿ ನಿರ್ಣಯವಾಗುತ್ತದೆ. ಅದರ ನಾಯಕರು ಜಾಗರೂಕರಾಗಿರದಿದ್ದರೆ ಕ್ರಿಸ್ತನ ಶಿಷ್ಯರಿಗೆ ಸೇವೆ ಮಾಡಿಸಿಕೊಳ್ಳಬೇಕು ಆದರೆ ಸೇವೆ ಮಾಡಬಾರದು ಎಂದು ಬೋಧಿಸುವವರಾಗಬಹುದು (ಮತ್ತಾಯ 20:28). ಸಭೆಯ ನಾಯಕರು ಸಭೆಯ ಸದಸ್ಯರು ಪ್ಯಾಡ್ ಹಾಕಿದ ಆಸನಗಳಿಗೆ ಒಲಿದು ಎಂಬುದನ್ನು ಬದಲಾಯಿಸುವಾಗ ದುಃಖ ಪಡುವರು. ಆದರೆ ಅವರು ಯಾಕೆ ಆಶ್ಚರ್ಯಪಡಬೇಕು? ನಾಯಕರು ಹೊಸ ಕ್ರೈಸ್ತರಿಗೆ ಸ್ವಯಂ ತ್ಯಾಗದ ಸೇವೆಯ ಮತ್ತು ವಿಧೇಯತೆಯ ಆಹ್ವಾನ ಕೊಡಬೇಕು. ತಮ್ಮ "ಮಕ್ಕಳಿಗೆ" ಅವರು ಕೇಳುವಂಥ ಪ್ರತಿಯೊಂದನ್ನು ಕೊಟ್ಟು, ಅನಂತರ ಅವರು ಅಷ್ಟು ಯಾಕೆ ಪ್ರಾಪಂಚಿಕರಾಗಿ ಬೆಳೆಯುವರು ಎಂದು ಆಶ್ಚರ್ಯಪಡುವಂಥವರಾಗ ಬಾರದು. ಜಾನ್ ಎಫ್ ಕೆನ್ನೆಡಿಯವರ ಮಾತನ್ನು ಸಂಕ್ಷೇಪಿಸಿ, ಕ್ರೈಸ್ತರು ಇದನ್ನು ಕಲಿಯ ಬೇಕು, "ಸಭೆಯು ಏನು ಮಾಡಬೇಕೆಂದು ನೀನು ಕೇಳಬೇಡ; ಆದರೆ ನೀನು ಸಭೆಗೆ ಏನು ಮಾಡಬೇಕು ಎಂದು ಕೇಳು."

*ಸದಸ್ಯರು ಸ್ವಯಂ ತೃಪ್ತಿಯನ್ನು ಪಡೆದುಕೊಳ್ಳುವ ಸಾಧನವಾಗಿ ಸಭೆಯನ್ನು ನೋಡು ವದಕ್ಕೆ ವಿರುದ್ಧವಾಗಿ, ನಾಯಕರು ಮಿಶನ್ ಕೆಲಸವು ಸಭೆಯ ಕೆಲಸದ ಹೃದಯದಲ್ಲಿದೆ ಎಂಬುದನ್ನು ಬೋಧಿಸಲಿಕ್ಕೆ ಪ್ರಾರಂಭಿಸಬೇಕು.* ಬೈಬಲಿನ ನೀತಿಯೊಂದಿಗೆ ಸಭೆಯು ನಾಲ್ಕು ರೀತಿಯ ಚಟುವಟಿಕೆಗಳಲ್ಲಿ ತೊಡಗಬೇಕು ಎಂದು ನಾವು ಹೇಳಬಹುದು: ಸುವಾರ್ತಾಸೇವೆ, ಭಕ್ತಿವೃದ್ಧಿ, ಪರೋಪಕಾರ ಮತ್ತು ಆರಾಧನೆ. ಈ ನಾಲ್ಕರಲ್ಲಿ, "ಸಭೆಯು ಯಾವುದರ ಬಗ್ಗೆ ಇರಬೇಕು?" ಎಂದು ಕೇಳುವಾಗ ಸುವಾರ್ತಾಸೇವೆಗೆ ಒತ್ತು ಕೊಡಲ್ಪಡುತ್ತದೆ ಯಾಕೆ?

(1) *ಸಭೆಯು, ಕ್ರಿಸ್ತನ ದೇಹವಾಗಿರುವದರಿಂದ, ಯೇಸುವು ತಾನು ಏನು ಮಾಡಲಿಕ್ಕೆ ಬಂದನೋ ಅದನ್ನು ಮಾಡಲಿಕ್ಕೆ ಅಂದರೆ ತಪ್ಪಿ ಹೋದವರನ್ನು ಹುಡುಕಿ ರಕ್ಷಿಸುವುದನ್ನು ಮಾಡಲಿಕ್ಕೆ ಮುಂಗೊಳ್ಳಬೇಕು (ಲೂಕ 19:10).*

(2) *ಸುವಾರ್ತಾಸೇವೆಯು ಪ್ರಾಥಮಿಕವಾದದ್ದು.* ಅದಿಲ್ಲದೆ, ಭಕ್ತಿವೃದ್ಧಿಪಡಿಸಲು, ಒಳ್ಳೆಯ ಕೆಲಸಗಳನ್ನು ಮಾಡಲು, ಇಲ್ಲವೇ ಆರಾಧನೆಯಲ್ಲಿ ದೇವರನ್ನು ಮಹಿಮೆಪಡಿಸಲು ಯಾರೂ ಇರುವದಿಲ್ಲ.

(3) *ಸುವಾರ್ತಾಸೇವೆಯು ಸಭೆಯು ಮಾತ್ರವೇ ಮಾಡಬೇಕಾದ ಕೆಲಸವಾಗಿರುತ್ತದೆ.* ಇತರರು ಜನರಿಗೆ ಚೆನ್ನಾಗಿರುವಂತೆ ಭಾವಿಸಲು ಸಹಾಯ ಮಾಡಬಹುದು, ಮತ್ತು ಇತರರು ಒಳ್ಳೆಯ ಕಾರ್ಯಗಳನ್ನು ಮಾಡಬಹುದು; ಆದರೆ ಹೊಸ ಒಡಂಬಡಿಕೆಯ ಸಭೆಯಲ್ಲಿ ಇರುವವರು ಮಾತ್ರವೇ ತಪ್ಪಿ ಹೋದ ಜಗತ್ತಿಗೆ ಕ್ರಿಸ್ತನ ರಕ್ಷಿಸುವ ಸುವಾರ್ತೆಯನ್ನು ಸಾರಬಲ್ಲರು. ತಪ್ಪಿ ಹೋದವರಿಗೆ ಸುವಾರ್ತೆಯನ್ನು ಸಾರುವಲ್ಲಿ ಸಭೆಯು ಸೋತುಹೋದರೆ, ಬೇರೆ ಯಾರೂ ಅದನ್ನು ಮಾಡಲಾರರು!

ಆದುದರಿಂದ, ಮಿಶನ್ ಕೆಲಸವು ಸಭೆಯ ಅಸ್ತಿತ್ವಕ್ಕೆ ಮೇಲೆ ಮಾತ್ರವೇ ಇರುವಂಥದ್ದಾಗಿರುವದಿಲ್ಲ. ಮಿಶನ್ ಕೆಲಸವು ಕ್ರೇಂದ್ರ ಉದ್ದೇಶವಾಗಿದೆ; ನಾವು ಜೀವಿಸಿರಲಿಕ್ಕೆ ಅದು ನಮ್ಮ ಕಾರಣವಾಗಿದೆ!

**ರಕ್ಷಣೆಯ ಬಗ್ಗೆ ಬೈಬಲಿನ ಮೂಲ ಸತ್ಯಗಳನ್ನು ದೃಢಪಡಿಸಿಕೊಳ್ಳುವುದು**

ಮೂರನೆಯದು, ಒಂದು ಸ್ಥಳಿಕ ಸಭೆಯು ರಕ್ಷಣೆಯ ಬಗ್ಗೆ ಬೈಬಲಿನ ತತ್ವವನ್ನು ಮತ್ತು ಹಳೇಕಾಲದ ಕೆಲವು ಸತ್ಯಗಳನ್ನು ಹೊಸದಾಗಿ ಒತ್ತಿಹೇಳಿ ದೃಢಪಡಿಸುವ ಅಗತ್ಯತೆ ಇರುತ್ತದೆ:

(1) ಎಲ್ಲರೂ ತಮ್ಮ ಸ್ವಂತ ಪಾಪ ಕಾರಣದಿಂದ ತಪ್ಪಿಹೋಗಿದ್ದಾರೆ.

(2) ಕ್ರಿಸ್ತನ ಮುಖಾಂತರ ಮಾತ್ರವೇ ಈ ಲೋಕದಲ್ಲಿ ಯಾರಾದರೂ ರಕ್ಷಿಸಲ್ಪಡಬಹುದು.

(3) ಸುವಾರ್ತೆಯು ಮಾತ್ರವೇ ರಕ್ಷಣೆಗಾಗಿ ದೇವರ ಬಲವಾಗಿದೆ.

(4) ನಂಬಿಕೆಯ ಮುಖಾಂತರ ಕೃಪೆಯಿಂದ ಜನರು ರಕ್ಷಿಸಲ್ಪಡುತ್ತಾರೆ.

(5) ಜನರು ಸುವಾರ್ತೆಗೆ ವಿಧೇಯರಾಗುವಾಗ ಇಲ್ಲವೇ ದೇವರ ಚಿತ್ತವನ್ನು ಮಾಡುವಾಗ, ಮಾತ್ರವೇ ನಂಬಿಕೆ ಮುಖಾಂತರ ಕೃಪೆಯಿಂದ ರಕ್ಷಿಸಲ್ಪಡುತ್ತಾರೆ.

(6) ಜವಾಬ್ದಾರಿಕೆಯುಳ್ಳ ಜನರು ಕ್ರಿಸ್ತನ ಸುವಾರ್ತೆಗೆ ಅದು ಹೊಸ ಒಡಂಬಡಿಕೆಯಲ್ಲಿ ಪ್ರಕಟಿಸಲ್ಪಟ್ಟಂತೆ, ಸ್ವೀಕರಿಸದಿದ್ದರೆ, ಅವರು ತಪ್ಪಿಹೋಗುತ್ತಾರೆ.

(7) ಸುಳ್ಳು ಬೋಧಕರು ಜಗತ್ತಿನಲ್ಲಿ ಇದ್ದಾರೆ. ಅವರ ಸುಳ್ಳು ಬೋಧನೆಗಳು ರಕ್ಷಿಸಲಾರವು, ಅವರ ಹಿಂಬಾಲಕರು ತಾವು ತಪ್ಪಿಹೋದವರಾಗಿದ್ದಾಗ್ಯೂ ತಾವು ರಕ್ಷಿಸಲ್ಪಟ್ಟಿದ್ದೇವೆ ಎಂದು ಯೋಚಿಸಬಹುದು.

(8) ತಪ್ಪಿ ಹೋದವರಿಗೆ ಸುವಾರ್ತೆಯನ್ನು ಸಾರುವ ಜವಾಬ್ದಾರಿಕೆಯು ಕ್ರಿಸ್ತನಿಂದ ಆತನ ಸಭೆಯಲ್ಲಿ ಇರುವವರಿಗೆ ಕೊಡಲ್ಪಟ್ಟಿದೆ. ಕ್ರೈಸ್ತರು ಈ ಕರ್ತವ್ಯದಲ್ಲಿ ಸೋತು ಹೋದರೆ, ತಪ್ಪಿ ಹೋದವರು ರಕ್ಷಿಸಲ್ಪಡಲಾರರು.

(9) ಹೊಸ ಒಡಂಬಡಿಕೆಯಲ್ಲಿ ಒಂದು ಸಭೆಯು ಮಾತ್ರವೇ ಗುರುತಿಸಲ್ಪಡಬಹುದು, ಮತ್ತು ದೇವರು ಬೈಬಲಿನಲ್ಲಿ ಕೊಡಲ್ಪಟ್ಟ ರೀತಿಯಲ್ಲಿ ತನ್ನನ್ನು ಆರಾಧಿಸಬೇಕೆಂದು ನಿರೀಕ್ಷಿಸುತ್ತಾನೆ.

(10) ಪರಲೋಕ ಮತ್ತು ನರಕ ಅಸ್ಥಿತ್ವದಲ್ಲಿರುತ್ತವೆ. ಮತ್ತು ನಾವು ಈ ಜೀವನದಲ್ಲಿ ಮಾಡುವಂಥದ್ದು, ನಮ್ಮನ್ನು ಒಳಗೊಂಡು ಕೆಲವರು ಪರಲೋಕದಲ್ಲಿವರೋ ಇಲ್ಲವೇ ನರಕದಲ್ಲಿ ಇರುವರೋ ಎಂಬುದನ್ನು ನಿರ್ಧರಿಸುತ್ತದೆ.

ಈ ಸಂಗತಿಗಳ ತಿಳುವಳಿಕೆಯ ಕೊರತೆಯು, ಅನೇಕ ಉದಾಹರಣೆಗಳಲ್ಲಿ, ಮಿಶನ್ ಸೇವೆ ಮಾಡದಿರುವದಕ್ಕೆ ಮತ್ತು ತನ್ನ ಸದಸ್ಯರ ಸಾಮಾಜಿಕ ಹಾಗೂ ಮಾನಸಿಕ ಸುಧಾರಣೆಗೆ ತಿರುಗಿ ಕೊಂಡದ್ದಕ್ಕೆ ಕಾರಣವಾಗಿದೆ. ಉದಾಹರಣೆಗಾಗಿ, ನಾವು ಜನರು ತಪ್ಪಿಹೋಗಿರುವದಿಲ್ಲವೆಂದು ನಾವು ನಂಬಿದರೆ, ಸುವಾರ್ತೆಯು ರಕ್ಷಿಸುವುದೆಂದು ನಂಬಿದರೆ, ಇಲ್ಲವೇ ಸುವಾರ್ತೆಯನ್ನು ಸಾರುವ ಜವಾಬ್ದಾರಿಕೆ ನಮಗಿದ್ದರೆ, ತಪ್ಪಿ

ಹೋದವರೊಂದಿಗೆ ರಕ್ಷಿಸುವ ಸಂದೇಶವನ್ನು ಹಂಚಿಕೊಳ್ಳುವಲ್ಲಿ ನಾವು ದೊಡ್ಡ ಪ್ರಯತ್ನ ಮಾಡಲಾರೆವು. ಇನ್ನೊಂದೆಡೆಯಲ್ಲಿ, ಸುವಾರ್ತೆಯನ್ನು ಪ್ರಸಾರ ಮಾಡುವದರಲ್ಲಿ ಕಾರ್ಯ ನಿರತರಾದರೆ, ಈ ಮಹಾ ಸಂಗತಿಗಳನ್ನು ನಾವು ದೃಢಪಡಿಸಿ ಕೊಳ್ಳತಕ್ಕದ್ದು - ಅವುಗಳನ್ನು ಪ್ರಸಂಗಿಸುವದರಿಂದ ಅಷ್ಟೇ ಅಲ್ಲ, ಅವುಗಳನ್ನು ನಂಬುವದರಿಂದ ಮತ್ತು ಅವುಗಳನ್ನು ನಾವು ನಂಬುವಂತೆ ಕಾರ್ಯಮಾಡುವದರಿಂದ!

**ಮಹಾ ಆಜ್ಞೆಯ ಜಾಗತಿಕ ದೃಷ್ಟಿಕೋನವಿರಲಿ**

ನಾಲ್ಕನೆಯದು, ಮಹಾ ಆಜ್ಞೆಯನ್ನು ಸ್ಥಳಿಕ ಸಭೆಯು ಅಧ್ಯಯನ ಮಾಡುವಂತೆ ಜಗತ್ತನ್ನು ಯೋಚಿಸತಕ್ಕದ್ದು. ನಾವು ಮಿಶನ್-ಮನಸ್ಸುಳ್ಳವರಾದರೆ, ನಾವು ಹೇಗೋ ಮಹಾ ಆಜ್ಞೆಯ ಜಾಗತಿಕ ಮನೋಭಾವನೆಯನ್ನು ಬೆಳಸಿಕೊಳ್ಳತಕ್ಕದ್ದು. ನಮ್ಮ ಸ್ವಂತ ಪಟ್ಟಣಗಳನ್ನು, ಪ್ರಾಂತ್ಯಗಳನ್ನು ಮತ್ತು ದೇಶವನ್ನು ಹೊಂದಿರುವ ಮೇರೆಗಳನ್ನು ದಾಟಿ ಅರುಹು ಉಳ್ಳವರಾ ಗಿರುವ ಅಗತ್ಯತೆಯಿದೆ.

ಅಪೊಸ್ತಲರ ಕೃತ್ಯಗಳು 1:8ರ, ಮೇಲಿನ ತಪ್ಪು ತಿಳುವಳಿಕೆಯ ಮೇಲೆ ಅವಲಂಭಿಸಿ, ನಮ್ಮ ಸ್ವಂತ ಪಟ್ಟಣಗಳಲ್ಲಿ, ಪ್ರಾಂತ್ಯಗಳಲ್ಲಿ ಇಲ್ಲವೇ ದೇಶದಲ್ಲಿ ನಾವು ಸಂಪೂರ್ಣವಾಗಿ ಸುವಾರ್ತಾಸೇವೆ ಮಾಡುವವರೆಗೆ ಬೇರೆ ಕಡೆಗಳಲ್ಲಿ ಪ್ರಸಂಗಿಸುವ ಜವಾಬ್ದಾರಿಕೆ ಇರುವದಿಲ್ಲ ಎಂದು ನಂಬುವಂತೆ ನಮಗೆ ತೋರುತ್ತದೆ. ಬೈಬಲ್ ಈ ವಿಚಾರವನ್ನು ಬೋಧಿಸುವದಿಲ್ಲ. ಅದಕ್ಕೆ ವಿರುದ್ಧವಾಗಿ ಅತೀ ದೂರದಲ್ಲಿದ್ದವರಿಗೂ ಸುವಾರ್ತೆಯು ಹೋಗಬೇಕೆಂದು ದೇವರು ಬಯಸುತ್ತಾನೆಂಬ ಸೂಚನೆಗಳಿಂದ ಬೈಬಲು ತುಂಬಿಕೊಂಡಿರುತ್ತದೆ. ಅಬ್ರಹಾಮನ ಸಂತತಿಯ ಮುಖಾಂತರ, ಎಲ್ಲಾ ಜನಾಂಗಗಳು ಆಶೀರ್ವದಿಸಲ್ಪಡಬೇಕು (ಆದಿಕಾಂಡ 12:3). ಮೆಸ್ಸೀಯನ ರಾಜ್ಯವು ಎಲ್ಲಾ ಜನಾಂಗಗಳು ರಕ್ಷಣೆಯನ್ನು ಕಂಡುಕೊಳ್ಳುವ ಸ್ಥಳವಾಗಿ ರುವದೆಂದು ಮುಂತಿಳಿಸಲ್ಪಟ್ಟಿತ್ತು (ಯೆಶಾಯ 2:2, 3). ನಾವು "ಲೋಕದ ಎಲ್ಲಾ ಕಡೆಗಳಿಗೆ ಹೋಗಬೇಕು" "... ಎಲ್ಲಾ ಸೃಷ್ಟಿಗೆ ಹೋಗಬೇಕು" ಎಂದು ಯೇಸು ಆಜ್ಞಾಪಿಸಿದನು (ಮಾರ್ಕ 16:15; ಮತ್ತಾಯ 28:18-20). "ಭೂಲೋಕದ ಕಟ್ಟ ಕಡೆಯವರೆಗೆ" ತನ್ನ ಸಾಕ್ಷಿಗಳಾ ಗಿರಲು ಯೇಸುವು ಅಪೊಸ್ತಲರಿಗೆ ಹೇಳಿದನು (ಅಪೊಸ್ತಲರ ಕೃತ್ಯಗಳು 1:8). ಜಗತ್ತಿನಲ್ಲೆಲ್ಲಾ ಹೇಗೆ ಪ್ರಸಾರವಾಯಿತು ಎಂಬುದನ್ನು ಪ್ರದರ್ಶಿಸಲು ಭಾಗಶಃವಾಗಿ ಅಪೊಸ್ತಲರ ಕೃತ್ಯಗಳ ಗ್ರಂಥವು ಬರೆಯಲ್ಪಟ್ಟಿತು; ಕ್ರಿಸ್ತನಿಗಾಗಿ ಜಗತ್ತಿನ ದರ್ಶನವಿರುವಂತೆ ಎಲ್ಲಾ ಕ್ರೈಸ್ತರನ್ನು ಆಹ್ವಾನಿಸುವ ಉದ್ದೇಶ ಅದಕ್ಕಾಗಿತ್ತು. ಪೌಲನ ಜೀವನದ ಅವಧಿಯಲ್ಲಿ ಸುವಾರ್ತೆಯು ತಿಳಿದ ಜಗತ್ತಿನಲೆಲ್ಲಾ ಪ್ರಸಂಗಿಸಲ್ಪಟ್ಟಿತು (ಕೊಲೊಸ್ಸೆ 1:23). ಪರಲೋಕದಲ್ಲಿ ಈ ವಿಶ್ವದ ಪ್ರತಿಯೊಂದು ಭಾಗದಿಂದ ಜನರು ಕರ್ತನನ್ನು ಆರಾಧಿಸುತ್ತಿರುವರು:

> ಇವುಗಳಾದ ಮೇಲೆ ಇಗೋ, ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿರುವುದನ್ನು ಕಂಡೆನು. ಅವರು ಸಕಲ ಜನಾಂಗ ಕುಲ ಪ್ರಜೆಗಳವರೂ ಸಕಲ ಭಾಷೆಗಳನ್ನಾಡುವವರೂ ಆಗಿದ್ದರು. ಅವರು ಬಿಳೀ ನಿಲುವಂಗಿಗಳನ್ನು ತೊಟ್ಟು ಕೊಂಡು ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದು ಕೊಂಡಿದ್ದರು. ಅವರು - ಸಿಂಹಾಸೀನ ನಾಗಿರುವ ನಮ್ಮ ದೇವರಿಗೂ ಯಜ್ಞದ ಕುರಿಯಾದಾತನಿಗೂ ನಮಗೆ ರಕ್ಷಣೆಯುಂಟಾದದ್ದಕ್ಕಾಗಿ ಸ್ತೋತ್ರ ಎಂದು ಮಹಾ ಶಬ್ದದಿಂದ ಕೂಗಿದರು (ಪ್ರಕಟಣೆ 7:9-10).

ಈ ಭೂಲೋಕದ ಮೇಲೆ ಜೀವಿಸುವ ಐದು ಬಿಲಿಯನ್ ಜನರಲ್ಲಿ ಯು.ಎಸ್‌ದಲ್ಲಿಯ ಸಭೆಗಳ ಸದಸ್ಯರು ಕೇವಲ ಒಂದು ಚಿಕ್ಕ ಶತದಷ್ಟಿರುವರೆಂಬುದನ್ನು ನಾವು

ಅರ್ಥಮಾಡಿಕೊಳ್ಳತಕ್ಕದ್ದು. ಜಗತ್ತಿನಲೆಲ್ಲಾ ಇರುವ ಸಭೆಯಲ್ಲಿಯ ಸದಸ್ಯದ ಲೆಕ್ಕ ಹಾಕುವದಾದರೆ ಎಲ್ಲವೂ ಒಟ್ಟಾಗಿ ಜಗತ್ತಿನ ಜನಸಂಖ್ಯೆಯಲ್ಲಿ ಒಂದು ಚಿಕ್ಕ ಶತದಷ್ಟಾಗುವೆವು. ಕ್ರೈಸ್ತತ್ವದ ಯಾವುದೇ ರೀತಿಯನ್ನು ಅರಿಕೆ ಮಾಡುತ್ತಿರುವವರನ್ನು ಸಂಖ್ಯೆಯನ್ನು ನೋಡುವುದಾದರೆ ಇಡೀ ಜನಸಂಖ್ಯೆಯಲ್ಲಿ ಬಹುಶಃ ಮೂವತ್ತು ಶತಕ್ಕಿಂತ ಕಡಿಮೆ ಸಂಖ್ಯೆಯು ಅಗಿರುವುದು. ಇದು ನಮ್ಮ ಜಗತ್ತು; ಐದು ಬಿಲಿಯನ್ ಕಳೆದು ಹೋದ ಜಗತ್ತಿನಲ್ಲಿ ಸುಮಾರು ಇನ್ನೂರು ಭಿನ್ನವಾದ ಜನಾಂಗಗಳೂ ಮತ್ತು ರಾಜ್ಯ ಕ್ಷೇತ್ರಗಳೂ ವಿವಿಧ ಸಂಸ್ಕೃತಿಗಳೊಂದಿಗೆ ಇರುವವು. ನಮ್ಮ ಸಭೆಯ ಕಟ್ಟಡದ ಬಾಗಿಲುಗಳನ್ನು ದಾಟಿ ... ನಮ್ಮ ನೆರೆ ಹೊರೆಯನ್ನು ದಾಟಿ ... ನಮ್ಮ ಪಟ್ಟಣದ ಮಿತಿಯ ಸಂಕೇತಗಳನ್ನು ದಾಟಿ ... ನಮ್ಮ ಪ್ರಾಂತ್ಯ ಮತ್ತು ಪ್ರದೇಶವನ್ನು ದಾಟಿ ... ನಮ್ಮ ದೇಶವನ್ನು ದಾಟಿ ನೋಡಲು ನಮ್ಮ ಕಣ್ಣುಗಳನ್ನು ಮೇಲುಕ್ಕೆತ್ತುವಾಗ ... ಆಗ ಮಾತ್ರವೇ ಕ್ರಿಸ್ತನು ಅದನ್ನು ನೋಡಿ ದಂತೆ ನೋಡಲು ಶಕ್ತರಾಗುವೆವು. ಆಗ ಮಾತ್ರವೇ, ಕೇವಲ ಮನೆಯಲ್ಲಿರುವವರಿಗಲ್ಲ ಆದರೆ "ಅಲ್ಲಿರುವವರಿಗೆ" ಸುವಾರ್ತೆ ಸಾರುವದರಲ್ಲಿ ಆಸಕ್ತಿಯನ್ನು ತೆಗೆದು ಕೊಳ್ಳುವಲ್ಲಿ ನಾವು ಪ್ರಾರಂಭಿಸುವೆವು.

**ಮಿಶನ್ ಪ್ರಯತ್ನಗಳಲ್ಲಿ ಸಹಾಯ ಮಾಡಲಿಕ್ಕೆ ಅವಕಾಶಗಳನ್ನು ಒದಗಿಸುವುದು**

ಐದನೆಯದು, ಸಭೆಯ ಎಲ್ಲಾ ಸದಸ್ಯರು ಮಿಶನ್ನುಗಳಲ್ಲಿ ವೈಯಕ್ತಿಕ ಆಸಕ್ತಿಯನ್ನು ತೆಗೆದು ಕೊಳ್ಳುವ ಅಗತ್ಯತೆಯಿರುತ್ತದೆ. ಒಮ್ಮೆ ಸಭೆಯ ನಾಯಕರು ಸಭೆಯಲ್ಲಿ ಮಿಶನ್ನುಗಳಲ್ಲಿ ಆಸಕ್ತಿ ಹುಟ್ಟಿಸುವ ವಾತಾವರಣವನ್ನು ಸ್ಥಾಪಿಸಿದಾಗ, ಅದು ಬೇರೂರಿ ಬೆಳೆಯಬಹುದು. ಆಗ ಅವರು ವೈಯಕ್ತಿಕವಾಗಿ ಮಿಶನ್ನುಗಳಲ್ಲಿ ತೊಡಗುವ ಅವಕಾಶಗಳನ್ನು ಒದಗಿಸುವ ಅವಶ್ಯಕತೆಯಿರುತ್ತದೆ.

*ಸ್ಥಳಿಕ ಸಭೆಗಳಿಗೆ ಮಿಶನ್ನುಗಳ ಬಗ್ಗೆ ಸುದ್ಧಿಗಳನ್ನು ಒದಗಿಸಬೇಕು ಮತ್ತು ಮಿಷನರಿಗಳನ್ನು ಪರಿಚಯಿಸುವ ಅಗತ್ಯತೆ ಇರುತ್ತದೆ.* ಮಿಶನ್ನುಗಳ ಬಗ್ಗೆ ಸುದ್ದಿಯನ್ನು ಹಂಚಿಕೊಳ್ಳುವ ಉದ್ದೇಶಕ್ಕಾಗಿ ಮಿಶನರಿಗಳನ್ನು ಸಭೆಯ ಮುಂದೆ ತರುವ ಅವಕಾಶಗಳನ್ನು ನಾಯಕರು ಹುಡುಕತಕ್ಕದ್ದು.

*ಕ್ರೈಸ್ತರು ಮಿಶನ್ನುಗಳ ಬಗ್ಗೆ ಆಸಕ್ತಿ ವಹಿಸುವಂತೆ ಹಾಗೂ ಮಿಶನ್ನುಗಳ ಮೇಲೆ ಕೇಂದ್ರೀಕರಿಸುವಂತೆ ಅವರನ್ನು ಪ್ರೋತ್ಸಾಹಿಸಲು ಪ್ರಯತ್ನವು ಮಾಡಲ್ಪಡತಕ್ಕದ್ದು.* ಬೋಧನೆ, ಪ್ರೋತ್ಸಾಹಿಸುವುದು ಮತ್ತು ಆಸಕ್ತಿವಹಿಸುವಂತೆ ಮಾಡುವುದು: ಹೆಚ್ಚಿನ ಮಿಶನರಿ ಆಸಕ್ತಿಯನ್ನು ಹುಟ್ಟಿಸಲು ನಾಯಕರು ಪ್ರೋತ್ಸಾಹಿಸುವದಕ್ಕಾಗಿ ಇವುಗಳನ್ನು ಉಪಯೋಗಿಸತಕ್ಕದ್ದು. ಪ್ರಸಂಗ ಪೀಠಗಳಲ್ಲಿ, ಬೈಬಲ್ ಕ್ಲಾಸ್‌ಪಾಠಗಳಲ್ಲಿ, ಧ್ಯಾನಗಳಲ್ಲಿ, ಮಿಶನ್ ಪ್ರಯತ್ನಗಳಲ್ಲಿ ಹೆಚ್ಚು ಬೆಂಬಲಕೊಡಲು ಸಭೆಗೆ ಸಹಾಯ ಮಾಡುವ ಕಾರ್ಯಗಾರಗಳಲ್ಲಿ ಮಿಶನ್‌ಗಳು ಮುಖ್ಯ ಪ್ರಸ್ತಾಪಗಳಾಗಿರಬೇಕು.

*ವೈಯಕ್ತಿಕವಾಗಿ ಮಿಶನ್ನುಗಳಲ್ಲಿ ಕಾರ್ಯನಿರತರಾಗುವಂತೆ ಕಾರ್ಯರೂಪದ ಅವಕಾಶಗಳು ಒದಗಿಸಲ್ಪಡತಕ್ಕದ್ದು.* ಸಭೆಯ ಸದಸ್ಯರು ಅನೇಕ ವಿಧಗಳಲ್ಲಿ ಮಿಶನ್ ಪ್ರಯತ್ನಗಳ ಭಾಗವಾಗಬೇಕು. ಅವರು ಮಿಶನರಿಗಳಿಗಾಗಿ ಪ್ರಾರ್ಥಿಸಬಹುದು ಮತ್ತು ಮಿಶನ್ ಕಾರ್ಯಕ್ಕೆ ಸಹಾಯ ಮಾಡಬಹುದು. ಮಿಶನರಿಯನ್ನು ಕ್ಷೇತ್ರದೊಳಗೆ ಕಳುಹಿಸಲು ಅವರು ಏರ್‌ಪೋರ್ಟಗಳಲ್ಲಿರಬಹುದು. ಮತ್ತು ಅವರನ್ನು ಹಿಂದಿರುಗಿ ಸ್ವಾಗತಿಸಲು ಅಲ್ಲಿರಬೇಕು. ಅವರು ಮಿಶನರಿಗಳಿಗಾಗಿ ವರದಿಗಾರರೂ, ಪ್ರಕಾಶಕರೂ ಕ್ರಾಂತಿಯ ಸಂಘಟಿಕರೂ ಆಗಿರಬಹುದು, ಅವರು ಮಿಶನರಿಗಳೊಂದಿಗೆ ಪತ್ರ ವ್ಯವಹಾರ ಮಾಡಬಹುದು, "ಜೋಪಾಸನೆಯ" ಪ್ಯಾಕೇಜುಗಳನ್ನು ಕಳುಹಿಸಬಹುದು, ವಿಶೇಷ ಸಂದರ್ಭಗಳಲ್ಲಿ ಅವರನ್ನು ಜ್ಞಾಪಿಸಿಕೊಳ್ಳಬೇಕು. ಅವರು ಪರದೇಶದ ಕ್ಷೇತ್ರಗಳಲ್ಲಿ ಪತ್ರ ವ್ಯವಹಾರದ ಮಖಾಂತರ ಬೋಧಿಸಬಹುದು. ಅವರು ಅಲ್ಪಾವಧಿ ಮಿಶನರಿ ಪ್ರಯತ್ನಗಳ ಲ್ಲಿ, ಕ್ಯಾಂಪೇನ್‌ಗಳಂಥವುಗಳಲ್ಲಿ

ಸಹಾಯ ಮಾಡಬೇಕು. ಬಲವಾದ ಕ್ರೈಸ್ತರು ಸಭೆಯು ಬಲಹೀನವಾಗಿರುವ ಕ್ಷೇತ್ರಗಳಿಗೆ ಹೋಗಿರಲು, ಮತ್ತು ಸಭೆಯನ್ನು ಕಟ್ಟುವಲ್ಲಿ ಸಹಾಯ ಮಾಡುವಾಗ ತಮ್ಮ ಸಹಾಯ ತಾವೇ ನಿರ್ವಹಿಸಿಕೊಳ್ಳುವಂತೆ ಪ್ರೋತ್ಸಾಹಿಸಲ್ಪಡಬೇಕು. ಯುವ ಕ್ರಿಸ್ತರು ಮಿಶನರಿ ಸೇವೆಗಾಗಿ ತರಬೇತುಗೊಳಿಸಲ್ಪಡಬಹುದು.

ಒಂದು ಸ್ಥಳಿಕ ಸಭೆಯಲ್ಲಿ ಮಿಶನ್ - ಮನಸ್ಸುಳ್ಳ ನಾಯಕತ್ವವಿದ್ದರೆ, ಸಭೆಯ ಉದ್ದೇಶದ ಬಗ್ಗೆ ಬೈಬಲಿನ ದೃಷ್ಟಿಕೋನವಿದ್ದರೆ, ರಕ್ಷಣೆಯ ಬಗ್ಗೆ ಬೈಬಲಿನ ತತ್ವದ ಬಗ್ಗೆ ಪುನಃ ದೃಢತೆಯಿದ್ದರೆ, ಮಹಾ ಆಜ್ಞೆಯ ಜಾಗತಿಕ ದೃಷ್ಟಿಕೋನವಿದ್ದರೆ, ಮತ್ತು ಮಿಶನ್ನುಗಳಲ್ಲಿ ಭಾಗವಹಿಸುವ ಅವಕಾಶಗಳಿದ್ದರೆ, ಸದಸ್ಯರಿಗೆ ಮಿಶನ್ ಕೆಲಸದ ಬಗ್ಗೆ ಹೆಚ್ಚು ಕೇಂದ್ರೀಕರಿಸುವದಕ್ಕೆ ಸಿದ್ಧರಾಗಲು ನಿಶ್ಚಿತವಾದ ಪರಿಣಾಮದಾಗುವುದು.

## ಪರಿಣಾಮಕಾರಿ ಮಿಶನ್ ಕೆಲಸದಲ್ಲಿ ಸಭೆಯನ್ನು ನಡಿಸುವುದು

ಸಭೆಯ ನಾಯಕರನ್ನು ಎದುರಿಸುವ ಎರಡನೆಯ ಆಹ್ವಾನವು ಮಿಶನ್ ಕಾರ್ಯವು ಸರಿಯಾಗಿ - ಮಾಡಲ್ಪಟ್ಟಿದೆ. ಅಂದರೆ ಅತಿ ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಮಾಡಲ್ಪಟ್ಟಿದೆ ಎಂದು ಭರವಸೆ ಕೊಡುವುದು.

ಈ ಹಂತದಲ್ಲಿ ಹಲವಾರು ಅಲ್ಲಗಳೆಯುವಿಕೆಗಳು ಅಗತ್ಯವಾಗಿರ್ರುವೆ: (1) ಯಾವುದೇ ರೀತಿಯಲ್ಲಿ ಮಿಶನ್ ಕೆಲಸವನ್ನು ಮಾಡುವಂಥದ್ದು ಒಪ್ಪಿಕೊಳ್ಳುವಂಥದ್ದಾಗಿದೆ. (2) ಬಹಳ ಸಲ, ಮಿಶನ್ನುಗಳಲ್ಲಿ ಯಾವುದೇ ಒಂದು ಸರಿಯಾದ ಮಾರ್ಗವಿರುವದಿಲ್ಲ: ಹೆಚ್ಚಾದ ಪರಿಣಾಮಕಾರಿಯಾದ ಮಾರ್ಗವು ಮತ್ತು "ಸರಿಯಾದ ಮಾರ್ಗವು" ಸ್ಥಳದಿಂದ ಸ್ಥಳಕ್ಕೆ ಹಾಗೂ ಸಮಯದಿಂದ ಸಮಯಕ್ಕೆ ಭಿನ್ನವಾಗಿರುತ್ತದೆ. (3) ಇಂದು ಶಿಫಾರಸ್ಸು ಮಾಡಿದ ಪದ್ಧತಿಗಳನ್ನು ಅನುಸರಿಸದ ಮಿಶನರಿಗಳಿಂದ ದೊಡ್ಡ ಕಾರ್ಯವು ಮಾಡಲ್ಪಟ್ಟಿದೆ. (4) ನಮ್ಮ ವಿಧಾನಗಳು ದೇವರು ಅವುಗಳನ್ನು ಆಶೀರ್ವದಿಸುವಂತೆ ಕಾರ್ಯಮಾಡುತ್ತವೆ; ಬೆಳವಣಿಗೆಯನ್ನು ಕೊಡುವಾತನು ಆತಾನಾಗಿದ್ದಾನೆ!

ಹಿಂದಿನ ಕಾಲದಲ್ಲಿ ವ್ಯಯಿಸಲ್ಪಟ್ಟ ಹೆಚ್ಚಾದ ಹಣವು ಮತ್ತು ಪ್ರಯತ್ನವು, ಮಾನವ ಕಣ್ಣು ನೋಡುವಂತೆ, ಫಲವಿಲ್ಲದ್ದೂ ಪರಿಣಾಮಕಾರಿಯಲ್ಲದ್ದೂ ಆಗಿರುತ್ತದೆ. ಸಾಧ್ಯವಾದ ರೀತಿಯಲ್ಲಿ ಕರ್ತನ ಹಣವನ್ನು ಉಪಯೋಗಿಸುವ ಆಸಕ್ತಿಯಲ್ಲಿ ನಾಯಕರು ದೀರ್ಘಕಾಲದಲ್ಲಿ ಅತೀ ಹೆಚ್ಚು ಪರಿಣಾಮಕಾರಿಯಾಗುವ ರೀತಿಯಲ್ಲಿ ವಿಧಾನಗಳನ್ನು ಉಪಯೋಗಿಸಬೇಕು ಮತ್ತು ಕೆಲಸಗಳಿಗೆ ಸಹಾಯ ಮಾಡಬೇಕು.

## ಮುಕ್ತಾಯ

ಮಿಶನ್ ಕಾರ್ಯವು ಯಾವುದೇ ದೇಶದಲ್ಲಿ, ದೊಡ್ಡದಿರಲಿ ಇಲ್ಲವೇ ಸಣ್ಣದಿರಲಿ, ಹೊಸದಾದದ್ದಾಗಿರಲಿ ಇಲ್ಲವೇ ಹಳೆಯದಾಗಿರಲಿ, ಎಲ್ಲಾ ಸಭೆಗಳಿಗೆ ಒಂದು ಆಹ್ವಾನವಾಗಿದೆ. ಯಾವುದೇ ಸ್ಥಳದಲ್ಲಿ ಸಭೆಯ ಪ್ರಾರಂಭದಿಂದ ಕ್ರೈಸ್ತತ್ವವು ಸುವಾರ್ತೆಯು ಹೋಗದ ಕಡೆಯಲ್ಲಿ ಅದನ್ನು ಪ್ರಸಂಗಿಸುವ ಜವಾಬ್ದಾರಿಕೆಯು ಬೋಧಿಸಲ್ಪಡಬೇಕು. ವೆಂಡೆಲ್ ಬ್ರೂಮ್ ಅವರು ಅಬಿಲೆನೆ ಕ್ರಿಶ್ಚಿಯನ್ ಯುನಿವರ್ಸಿಟಿಯಲ್ಲಿ ಕ್ಲಾಸ್ ರೂಮುಗಳಲ್ಲಿ 1973ರಲ್ಲಿ ಬಹಳ ಸಲ ಹೀಗೆ ಹೇಳಿದರು, "ಮಿಶನ್ನುಗಳ ಗುರಿಯು ಸಭೆಗಳನ್ನು ನೆಡುವ, ಸಭೆಗಳನ್ನು ನೆಡುವ, ಸಭೆಗಳನ್ನು ನೆಡುವ ಸಭೆಗಳನ್ನು ನೆಡುವದಾಗಿದೆ ... ."

ಆಸ್ಟ್ರೇಲಿಯಾದಲ್ಲಿ ಮಿಶನ್ ಕೆಲಸವನ್ನು ನಾನು ಮಾಡುತ್ತಿದ್ದಾಗ, ಅಲ್ಲಿಯ ಸಭೆಗಳಲ್ಲಿಯ ಮಿಶನರಿಗಳು ಮಲೇಶಿಯಾದಲ್ಲಿ ಸುವಾರ್ತೆಯನ್ನು ಪ್ರಸಂಗಿಸಲು ಸಹಾಯ ಮಾಡಲು ಸಹೋದರರನ್ನು ಪ್ರೋತ್ಸಾಹಿಸಿತು. ಆಸ್ಟ್ರೇಲಿಯನ್ ಸಭೆಯು ಇತರ ಸಭೆಗಳಿಂದ ಸಹಾಯವನ್ನು ಸ್ವೀಕರಿಸುತ್ತಿತ್ತು, ಅಂದರೆ ಅದರ ಪ್ರಸಂಗಿಗಳು ವಿದೇಶದಿಂದ ಸಹಾಯ

ಪಡೆದು ಕೊಳ್ಳುತ್ತಿದ್ದರು. ಯಾಕೆ? ಯುವ ಸಭೆಯು ಅವರೂ ಸಹ ಮಹಾ ಆಜ್ಞೆಗೆ ವಿಧೇಯರಾಗಬೇಕೆಂದು ಕಲಿತುಕೊಳ್ಳಬೇಕೆಂದು ನಾವು ನಂಬಿದ್ದೆವು. ಆ ಸಭೆಗಳು ಇತರರಿಂದ ಯಾವಾಗಲೂ ಸ್ವೀಕರಿಸಿಕೊಳ್ಳುವ ಸಭೆಗಳಾಗಿವೆಯೆಂಬುದನ್ನು ಯೋಚಿಸುವ ಅಗತ್ಯತೆಯುಳ್ಳವುಗಳಾಗಿರದೇ, ಅದರ ಮುಖಾಂತರ ಬೇರೆ ಇತರ ಸ್ಥಳಗಳಲ್ಲಿ ಸುವಾರ್ತೆಯು ಸಾರಲ್ಪಡಬೇಕು. ಒಂದು ಕಳುಹಿಸುವ ಸಭೆಯಾಗಬೇಕು, ಕೇವಲ ಸ್ವೀಕರಿಸಿಕೊಳ್ಳುವ ಸಭೆಯಾಗಿರಬಾರದು.

ಈ ರೀತಿಯಲ್ಲಿ ನಾವು ನಮ್ಮೆಲ್ಲರನ್ನೂ ನೋಡಿಕೊಳ್ಳಬೇಕು! ಯಾವುದೇ ಸಭೆಯು ಬಹಳ ಹೊಸದಾಗಿ ಸ್ಥಾಪಿಸಲ್ಪಟ್ಟಿರುವದಿಲ್ಲ, ಮತ್ತು ಯಾವುದೇ ಸಭೆಯು ಬಹುಕಾಲದಿಂದ ಅಸ್ತಿತ್ವದಲ್ಲಿರುವದಿಲ್ಲ, "ಇನ್ನೊಂದು ಸ್ಥಳದಲ್ಲಿಯ ಜನರು ತಮ್ಮ ರಕ್ಷಣೆಗಾಗಿ ಒಟ್ಟಾರೆ ನಮ್ಮ ಮೇಲೆ ಅವಲಂಭಿಸಿದ್ದರೆ, ಅದರ ಬಗ್ಗೆ ನಾವು ಏನನ್ನು ಮಾಡಲಾರೆವು?" ಎಂದು ಕೇಳಿ ಕೊಳ್ಳೋಣ, ಅದು ಸತ್ಯ ಸಂಗತಿಯಾಗಿರಬಹುದು.

---

ಟಿಪ್ಪಣಿ

[1]ಈ ಭಾಗವು, ಭಾಗಶಃವಾಗಿ, "Involving the Rank-and-File Christian in Missions,"ಎಂಬ ತಲೆ ಬರಹದ ಭಾಷಣದಿಂದ ತೆಗೆದು ಕೊಳ್ಳಲ್ಪಟ್ಟಿದೆ. ಇದು ಫೆಬ್ರವರಿ 5, 1990ರಂದು ಕೊಯ್ ರೋಪರ್ ಅವರು ಫ್ರೀಡ್ - ಹಾರ್ಡೆಮಾನ್ - ಲೆಕ್ಚರ್‌ಶಿಪ್‌ದಲ್ಲಿ ಪ್ರಸ್ತುತಪಡಿಸಿದ್ದರು. "Involving Every Christian in Missions,"ದಂತೆ ಅನಂತರ ಮೂರು ಭಾಗಗಳಲ್ಲಿ ಪ್ರಕಟಿಸಲ್ಪಟ್ಟಿತು, *The World Evangelist* 19 (August 1990): 1; (September 1990): 4; (October 1990): 16.